## ಮನದ ಭಾಷೆಯ 'ಚೆನ್ನುಡಿ'

**'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್ ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.**



ಮೇಲೆ ಎಷ್ಟೊತ್ತು ಕುದಿಸವ್ರು, ಎಷ್ಟು ಕರಿಬೇವಿನ ಎಲೆ ಹಾಕವ್ರು ಹೇಳಲ್ಲಿವರಿಗೆ ಕೇಳದಿ. ಅಂತೂ ಒಂತಾಸುಗೂಡಿ ಕಾಳ್ಮೆಣಸಿನ ಸಾರು ರೆಡಿ ಮಾಡಿದ ಮೇಲೆ ರುಚಿ ನೋಡನ ಹೇಳಿ ಒಂದ್ ಬಟ್ಟು ಬಾಯಿಗೆ ಹಾಕ್ತಿ... ಅದ್ಭುತ! ಉಪ್ಪು ಹುಳಿಖಾರ ಎಲ್ಲ ಅಚ್‌ಕಟ್. ಅತ್ತೆ ಮಾಡಿದ ಸಾರು ಹುಗುಶಿಡ ನಮ್ನಿ ಆಜು ಇವತ್ತು ಆನು ಮಾಡಿದ ಸಾರು, ಊಟಕ್ಕೆ ಕುಂತವ್ವ ಇವತ್ತು ಭಾರೀ ಹೊಗಳ್ತ ಯನ್ನ ಅಡ್ಗೆನ ಅದು... ಇದು... ಹೇಳಿ ಆನು ಮನ್ಸಲ್ಲಿ ಡಬ್ಬಲ್ ಡೆಕ್ಕರ್ ಬಸ್ ಹತ್ತಿ ಕುಂತಿ.

ಅಂತೂ ಸಂಜೆ ಆಫೀಸಿಂದ ಬಂದವ್ವ ಊಟ ಶುರು ಮಾಡಜ. ಬಡಿಸ್ಕ್ಯಂಡು ಸಮಾ ಊಟ ಮಾಡ್ಡ. ಮತ್ತೆ ಅನ್ನ ಮತ್ತೆ ಕಾಳ್ಮೆಣಸಿನ ಸಾರು... ಹಿಂಗೇ ಮೂರು ಸಲ ಆತು. ಹಂಗೆ ಹೇಳಿ ಬಾಯಲ್ಲಿ ಉಪ್ಪುಉಪ್ಪಿನ ಕಲ್ಲು ಮಾತಿಲ್ಲೆ. ಇನ್ನು ತಡಕಂಬ್ಲಾಗ್ದೇ 'ಸಾರು ಹೇಗಾಗಿದೆ?' ಹೇಳಿ ಆನೇ ಕೇಳ್ದಿ. 'ಚನಾಗಿದೆ. ಅದ್ಕೇ ಬರೀ ಸಾರಲ್ಲೇ ಊಟ ಮಾಡಿದ್ದು. ಆದ್ರೂ... ಅಮ್ಮ ಮಾಡಿದ್ ಸಾರಿನ ರುಚಿ ಇಲ್ಲ' ಅಂದ್ಬಿಡವ! ಒಂದ್ ಸಲ ತಲೆ ಗಿರಕ್ ಅಂತು. ಮದ್ವೆ ಆಗಿದ್ ಹೊಸಾದಲೀ, ಯನ್ನ ರೌದ್ರಾವತಾರ ಇವ್ನ ಮುಂದೆ ತೋರ್ಸಿರೆ ಪಾಪ ಹೆದ್ರಿ ಹೋಕು ಪಾರ್ಟಿ, ಸಂಜೆ ಬರೀ ಒಂದಷ್ಟು ಮೊಸರವಲಕ್ಕಿನೇ ತಿನ್ಲಿ, ಸ್ವಲ್ಪ ದಾರಿಗೆ ಬರ್ತಾ ತಗ ಹೇಳಿ ಮನ್ಸಲ್ಲೇ ಅಂದ್ಕಂಡು ಸುಮ್ನಾದಿ ಆವತ್ತು. ಮಾರನೇ ದಿನ ಅತ್ತೆಗೆ ಫೋನ್ ಮಾಡಿ ಸಾರು ಚಲೋ ಆಗಿದ್ ಸುದ್ದಿ ಹೇಳ್ದಾಗ ಖುಶಿ ಆತು ಅದ್ಕೆ. ಮಗ ಅಂತೂ ಹೊಟ್ಟೆ ತುಂಬಾ ಉಂಡ ಹೇಳಿ ಸಮಾಧಾನಾಗಿಕ್ಕು.

ಹೀಂಗೆ ಮುಂದುವರೀತಾ ಇತ್ತು ಸಂಸಾರ. ವರ್ಷ ಕಳೀತ ಬಂದಾಂಗೆ ಅಡುಗೆ ಹದಾನೂ ಕೈಲಿ ಕೂತ್ಗಂಡ್ತು. ಎಲ್ಲೋ ಅಪರೂಪಕ್ಕೆ ಒಂದು ಬಟ್ಟು ಬೆಲ್ಲ ಜಾಸ್ತಿ ಒಂದು ಹರಳು ಉಪ್ಪು ಕಮ್ಮಿ ಇಂಥದ್ದೇ ಶಣ್ಣ ಪುಟ್ಟ ಎಡಬಟ್ಟು ಬಿಟ್ರೆ ಬೇರೆ ಎಲ್ಲ ಅಡುಗೆ ಚಲೋನೇ ಆಗ್ತಿತ್ತು. ಮಾಡಿದ್ದೆಲ್ಲ ಖಾಲಿ ಆಗಿ ಪಾತ್ರೆ ಲಕಲಕ ಹೊಳೀವಂಗೆ ಊಟ ಮಾಡದು ನೋಡಿರೆ ಮನ್ಸಿಗೆ ಖುಷಿ ಬೇರೆ. ಆವಾಗಿವಾಗ ಒಮ್ಮೊಮ್ಮೆ 'ಚನಾಗಿದೆ' ಹೇಳ ಶಬ್ದ ಬರ್ತಿತ್ತು ಖರೆ, ಆದ್ರೆ ಅದ್ರ ಹಿಂದೆ 'ಅಮ್ಮ ಮಾಡಿದಷ್ಟು...' ಹೇಳ ವಾಕ್ಯನೂ ಪರಾಮಶಿ ಆಗಿ ಬಂದೇ ಬಿಡ್ತಿತ್ತು. ನಂತ್ರ ಒಂದು ಐದು ನಿಮಿಷದ್ ಕಿಸಿಪಿಸಿ. ಆಮೇಲೆ ಮತ್ತೆಲ್ಲ ಸರಿ!

ಒಂದಿನ ಅಣ್ಣನ ಹೆಂಡ್ತಿ, ಅಂದ್ರೆ ಯನ್ನ ಅತ್ಗೆ ಹತ್ರ ಹೀಂಗೆ ಲೋಕಾಭಿರಾಮ ಮಾತಾಡ್ತಾ ಇದ್ದಿದ್ದಿ. ಆವಾಗ ಯುಗಾದಿಗೆ ಹೋಳ್ಗೆ ಮಾಡಿದ ಸುದ್ದಿ ಬಂತು. ಅತ್ಗೆ ತನ್ನ ದುಃಖ ಹೇಳ್ಚು. 'ಅಲ್ದೇ, ಬೆಳಗಾಮುಂಚೆ ಎದ್ದ ಬಿದ್ದ ಹೇಳಿ ಎಲ್ಲ ತಯಾರಿ ಮಾಡ್ಕ್ಯಂಡು ಒಂದು ಐವತ್ ಹೋಳ್ಗೆ ಮಾಡಿದಿದ್ದಿ ಯುಗಾದಿಗೆ ಹೇಳಿ. ತಿನ್ನಲೂ ಭಾರೀ ಚಲೋ ಆಗಿತ್ತು. ಮೂರು ಹೋಳ್ಗೆ ತಿಂದಮೇಲೆ ನಿನ್ ಅಣ್ಣ ಈ ಹೋಳ್ಗೆ ಅಡ್ಡಿಲ್ಲೆ. ಆದ್ರೆ ಆಯಿ ಮಾಡ ಹೋಳ್ಗೆ ನಮ್ನಿ ಆಜಿಲ್ಲೆ... ಅಂದ್ಬಿಟ್ಚಲೇ' ಹೇಳಿ ಅಲವತ್ಕಂಡ್ತು. ಆವತ್ತು ರಾತ್ರಿ ಆನು ಕಷ್ಟಪಟ್ಟು ಪೂರಿ ಭಾಜಿ ಮಾಡಿದ್ದು ಹೌದು, ಆದ್ರೆ 'ಹೆಂಗಾಜು' ಹೇಳಿ ಗಂಡನ ಹತ್ರ ಅಪ್ಪಿತಪ್ಪಿಯೂ ಕೇಳಿದ್ನೆಲ್ಲೆ. ಅದೆಂತೋ ಹೇಳ್ವಲಿ, ಎಲ್ಲಾರ್ ಮನೆ ದ್ವಾಸೆನೂ...

ಇನ್ನೊಂದು ಮಜಕೂರು ಸುದ್ದಿ ಹೇಳ್ತಿ ಕೇಳಿ. ಈಗೊಂದು ಐದು ವರ್ಷದ ಹಿಂದೆ, ಯನ್ನ ಅತ್ತೆ ಯಮ್ಮನಿಗೆ ಬಂದು ಎರಡು ವಾರ ಉಳದಿತ್ತು. ತಾನು ಹೊರಡ ಮೊದ್ಲು, ಯಂಗಕ್ಕೆ ಮೂರ್ನಾಲ್ಕು ದಿನಕ್ಕೆ ಸಾಕಾಗಷ್ಟು ಹಾಗ್ಲಕಾಯಿ ಪಲ್ಯ, ಚಟ್ನಿಪುಡಿ, ಕಾಳು ಮೆಣ್ಸಿನ ಸಾರು ಎಲ್ಲಾನೂ ಮಾಡಿ ಫ್ರಿಜ್ಜಿನಲ್ಲಿ ಇಟ್ಟಿಕ್ಕೆ ಹೋಗಿತ್ತು. ಆನು ಮೊದ್ಲೇ ಅಡುಗೆ ಕಳ್ಳಿ. ಮರ್ದಿನ ಒಂದು ಶಿದ್ದೆ ಅನ್ನ ಬಾಗ್ಸಿ, ಅತ್ತೆ ಮಾಡಿಟ್ಟಿದ್ದ ಸಾರೇ ಖಡಕ್ ಬಿಶಿ ಮಾಡಿಟ್ಟೆ. ಹೊಟ್ಟೆಬಿರಿ ಊಟ ಮಾಡಿದ ಮೇಲೆ ಮತ್ತೆ ಹಳೇ ಸಲ್ಲು 'ಸಾರು ಚನಾಗಿದೆ, ಆದ್ರೆ ಅಮ್ಮ ಮಾಡಿದ್ ಸಾರಿನಾಂಗಿಲ್ಲ...' ಇವನಮ್ಮನೇ ಮಾಡಿಟ್ಟು ಹೋದ ಕಾಳ್ಮೆಣಸಿನ ಸಾರು ಹೇಳ ವಿಷಯ ಗೊತ್ತೇ ಇಲ್ದೆ ಮಾರಾಯನಂಗೆ! ವಿಷಯ ಹೇಳಿದ ಕೂಡ್ಲೆ ಹೊಟ್ಟೆ ಹುಣ್ಣಾಪ್ಪಂಗೆ ಇಬ್ರೂ ನೆಲದ ಮೇಲೆ ಉರುಳಾಡಿ ನೆಗ್ಯಾಡದ್ಯ. ಆವತ್ತಿಂದ 'ಆದ್ರೆ ಅಮ್ಮ ಮಾಡಿದ್...' ಹೇಳ ಮಾತು ಬಂದ್ರೆ ಒಂದು ಕಿವಿಲ್ಲಿ ಕೇಳಿ ಇನ್ನೊಂದು ಕಿವಿಲಿ ಬಿಡ ಪದ್ಧತಿ ಜಾರಿಗೆ ತಂದಿ.

ಯನ್ನ ಮಗ ಮದುವೆ ವಯಸ್ಸಿಗೆ ಬಂದು, ಯಂಗೊಂದು ಸೊಸೆನ ಮನಿಗೆ ಕರ್ಕಂಡು ಬಂದು, ಸೊಸೆ ಏನಾದ್ರೂ ಸೊಲ್ಪ ಅಡುಗೆ ಮಾಡಂತವಳಾಗಿ, ಮಗನತ್ರ ಸೊಸೆ ಅಡುಗೆ ಹೆಂಗಾಜು ಕೇಳಿ, ಆವಾಗ ಮಗರಾಯ 'ಅಡ್ಡಿಲ್ಲೆ ಚಲೋ ಆಜು, ಆದ್ರೆ ಯನ್ನ ಅಮ್ಮ ಮಾಡಿದಾಂಗಾಜಿಲ್ಲೆ...' ಹೇಳದನ್ನ ಈ ಪಾಪಿ ಕಿವಿಯಲ್ಲಿ ಕೇಳ್ಬಿಟ್ರೆ ಜೀವಕ್ಕೆ ಹನಿ ಸಮಾಧಾನ ಆಗ್ತೇನ. ■

**ಕಳೆದ ವಾರದ 'ಚೆನ್ನುಡಿ' 'ಈಗಿದು ಬರದ ಭೂಮಿಯಲ್ಲ' ಕೇಳಿ ಜಯಲಕ್ಷ್ಮಿ ಪಾಟೀಲ ಅವರ ಧ್ವನಿಯಲ್ಲಿ**

**ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.**

